vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI » BENGALURU
ಸೋಮವಾರ
27 ಮಾರ್ಚ್ 2023
27 MARCH 2023
3

ಕೃಷಿ, ಜೀವನೋಪಾಯಕ್ಕೆ ನಗರೀಕರಣದ ಅಪಾಯ

ಭಾರತ ಕೃಷಿ ಪ್ರಧಾನ ದೇಶ. ಕೃಷಿ ಹಾಗೂ ಕೃಷಿ ಸಂಬಂಧಿತ ಕ್ಷೇತ್ರಗಳ ಅವಲಂಬಿತರ ಸಂಖ್ಯೆ ದೇಶದ ಜನಸಂಖ್ಯೆಯ ಅರ್ಧಕ್ಕಿಂತ ಹೆಚ್ಚಿದೆ. ಆದರೆ, ಬದಲಾದ ಕಾಲಘಟ್ಟದಲ್ಲಿ ನಗರೀಕರಣದ ಪ್ರಭಾವ ವ್ಯವಸಾಯ ಕ್ಷೇತ್ರದ ಮೇಲೆ ಸಾಕಷ್ಟು ಹೆಚ್ಚಿದೆ. ಇದರಿಂದ ನಗರದಂಚಿನಲ್ಲಿರುವ ರೈತರು ಕೃಷಿ ಬಿಟ್ಟು ಅನ್ಯ ಉದ್ಯೋಗದತ್ತ ಮುಖ ಮಾಡುವುದು ಅನಿವಾರ್ಯವಾಗಿದೆ. ಈ ಬದಲಾವಣೆಯಿಂದ ನಗರ ವಾಸಿಗಳಿಗೆ ಆಹಾರ ಭದ್ರತೆ, ಆಹಾರ ಪೂರೈಕೆ, ಪೌಷ್ಟಿಕಾಂಶದ ಕೊರತೆ ಕಾಡುತ್ತಿದೆ.

ಆರ್.ತುಳಸಿಕುಮಾರ್ ಬೆಂಗಳೂರು

ಗ್ರಾಮೀಣ ಭಾಗದಲ್ಲಿ ಕೃಷಿ ಮೇಲಿನ ಅವಲಂಬನೆ ಕಡಿಮೆಯಾಗುತ್ತಿದೆ. ಕೃಷಿ ಲಾಭದಾಯಕ ಅಲ್ಲ ಎಂಬ ಕಾರಣಕ್ಕೆ ರೈತಾಪಿ ವರ್ಗದ ಯುವ ಪೀಳಿಗೆ ಕೈ ಕೆಸರು ಮಾಡಿಕೊಂಡು ಮೊಸರು ಸವಿಯುವ ಕಷ್ಟಕರ ಕೆಲಸದಿಂದ ವ್ಯವಸಾಯ ಮಾಡದೆ ಅಂತರ ಕಾಯ್ದುಕೊಳ್ಳುತ್ತಿದ್ದಾರೆ. ಜತೆಗೆ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚಳ, ಕುಲಕಸುಬು ಬಿಟ್ಟು ಅನ್ಯ ವೃತ್ತಿಯತ್ತ ದೃಷ್ಟಿ, ಭೂಮಿ ಹಿಡುವಳಿಯಲ್ಲಿ ಕಡಿತ, ವಲಸೆ ಹಾಗೂ ಇನ್ನಿತರ ಅಂಶಗಳು ವ್ಯವಸಾಯ ವಲಯಕ್ಕೆ ಆಪಾಯವನ್ನು ತಂದೊಡ್ಡಿವೆ.

ಈ ಪ್ರಮುಖ ವಿದ್ಯಮಾನಗಳು ಮಾನವನ ಆಹಾರ ಭದ್ರತೆ ಮೇಲೆಯೇ ನೇರ ಪರಿಣಾಮ ಬೀರುತ್ತಿದೆ. ಇಷ್ಟು ದಿನ ನಗರೀಕರಣದಿಂದ ಪಟ್ಟಣ, ಅರೆ ಪಟ್ಟಣ ಹಾಗೂ ನಗರಗಳಲ್ಲಿ ಉದ್ಯೋಗ ಸೃಷ್ಟಿ ಆಗುತ್ತಿದೆ ಎಂಬ ಕೂಗು ಕೇಳಿಬಂದಿತ್ತು. ಇದರಿಂದ ನಗರದಲ್ಲಿ ವಾಸ ಮಾಡುವ ಜನರಿಗೆ ಉದ್ಯೋಗ ದೊರೆತು ಆರ್ಥಿಕವಾಗಿ ಸಬಲರಾಗುತ್ತಾರೆಂಬ ಪ್ರತೀತಿ ಇತ್ತು. ಆದರೆ, ಕೃಷಿ ಮೂಲದಿಂದ ಅನ್ಯ ಉದ್ಯೋಗಕ್ಕೆ ಕಾಲಿಟ್ಟವರ ಜೀವನ ಅಷ್ಟು ಸುಭದ್ರವಾಗುತ್ತಿಲ್ಲ. ನಗರದಲ್ಲಿದ್ದಾಗ ಸಿಗುವ ಸೌಲಭ್ಯ ಸಿಗುತ್ತಿದ್ದರೂ, ವೈಯಕ್ತಿಕವಾಗಿ ಮೇಲೆ ಬರುವ ಹಾಗೂ ಕುಟುಂಬ ನಿರ್ವಹಣೆ ಹಿಂದಿನ ಸ್ಥಿತಿಯಲ್ಲೇ ಮುಂದುವರಿದಿದೆ. ಇದು ಕೃಷಿ ಬಿಟ್ಟು ನಗರ ಸೇರಿದವರ ನೈಜ ಸ್ಥಿತಿಗತಿ.

» ಬೆಂಗಳೂರು ಕೃಷಿ ವಿವಿ ವಿಜ್ಞಾನಿಗಳ ತಂಡದಿಂದ ಅಧ್ಯಯನ

ಇನ್ನೊಂದೆಡೆ ನಗರ, ಪಟ್ಟಣ ಪ್ರದೇಶದಲ್ಲಿರುವ ಜನರಿಗೆ ಆಹಾರ ಹೊಂದಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಮನೆಮಂದಿಗೆಲ್ಲ ರುಚಿ, ಶುಚಿಯಾದ ಆಹಾರ ತಯಾರಿಸಲು ಕಚ್ಚಾ ಸಾಮಗ್ರಿಗಳ ಬೆಲೆಯೇರಿಕೆಯ ತಾಪ ತಡೆಯಲಾಗುತ್ತಿಲ್ಲ. ಪೌಷ್ಟಿಕಾಂಶಯುಕ್ತ ಆಹಾರ ಲಭ್ಯತೆ ಕೂಡ ಕ್ರಮೇಣ ಇಳಿಕೆಯಾಗುತ್ತಿದೆ. ಕಲಬೆರಿಕೆ ಇಲ್ಲದ ತರಕಾರಿ, ಸೊಪ್ಪು, ಧಾನ್ಯಗಳನ್ನು ಹೊಂದಿಸುವುದು ಮತ್ತಷ್ಟು ತ್ರಾಸದಾಯಕವಾಗಿದೆ. ಇದು ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ತಂದೊಡ್ಡಿದ್ದು, ರೋಗ ಬಾಧೆ ತಡೆಯಲು ದೊಡ್ಡ ಮೊತ್ತವನ್ನು ಖರ್ಚು ಮಾಡುವುದು ಅನಿವಾರ್ಯವಾಗಿದೆ. ಇಂತಹ ಕಣ್ಣಿಗೆ ಕಾಣದ ಅಂಶಗಳನ್ನು ಪಟ್ಟಿ ಮಾಡಿ ಕೃಷಿ ಹಾಗೂ ಪರಿಸರದ ಮೇಲಾಗುತ್ತಿರುವ ನಗರೀಕರಣದ ಪ್ರಭಾವ ಹಾಗೂ ಪಲ್ಲಟದ ಆಪಾಯಗಳನ್ನು ದಾಖಲಿಸುವ ಮತ್ತು ಇವುಗಳಿಗೆ ಪರಿಹಾರೋಪಯಾಗಳನ್ನು ಕಂಡುಕೊಳ್ಳಲು ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳ ಮೇಲೆ ಆಗುತ್ತಿರುವ ಪರಿಣಾಮದ ಬಗ್ಗೆ ಅಂಕಿ-ಅಂಶ ಸಹಿತ ಮಾಹಿತಿ ಕಲೆ ಹಾಕಿದೆ. ಇದನ್ನು ನುರಿತ ವಿಜ್ಞಾನಿಗಳು ಹಾಗೂ ಪರಿಣತರಿಂದ ವಿಶ್ಲೇಷಿಸಿ ಭವಿಷ್ಯದಲ್ಲಿ ಕೃಷಿ ಮೇಲೆ ನಗರೀಕರಣದ ಸವಾರಿ ಮಾಡದಂತೆ ಮಾರ್ಗೋಪಾಯ ಕಂಡುಕೊಳ್ಳುವತ್ತಲೂ ದೃಷ್ಟಿ ಹರಿಸಲಾಗಿದೆ.



ಕೃಷಿ ಮೇಲಾಗುತ್ತಿರುವ ನಗರೀಕರಣದ ಕುರಿತು ಅಧ್ಯಯನ ಪ್ರಗತಿಯಲ್ಲಿದ್ದು,



ತಾತ್ಕಾಲಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮುಂದಿನ ವರ್ಷ ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ವರದಿಯಲ್ಲಿ ಸಮಸ್ಯೆಗಳ ಜತೆಗೆ ಅವುಗಳಿಗೆ ಪರಿಹಾರ ಸೂತ್ರವನ್ನೂ ಶಿಫಾರಸು ಮಾಡಲಾಗುವುದು.

| ಕೆ.ಬಿ.ಉಮೇಶ್ ಸಂಶೋಧನಾ ನಿರ್ದೇಶಕ, ಬೆಂಗಳೂರು ಕೃಷಿ ವಿವಿ

ನಗರೀಕರಣ ಜಾಗತಿಕ ಸಮಸ್ಯೆಯಾಗಿ ಮಾರ್ಪಡುತ್ತಿದೆ. ಇದಕ್ಕೆ ಪರಿಹಾರೋಪಾಯಗಳನ್ನು ಬೇಕಾಬಿಟ್ಟಿಯಾಗಿ ತೆಗೆದುಕೊಳ್ಳದೆ ವೈಜ್ಞಾನಿಕವಾಗಿ ಅಧ್ಯಯನ ಮಾಡಿ ನೀತಿ ರೂಪಿಸುವ ಅಗತ್ಯ ಇದೆ. ಈ ಕೆಲಸವನ್ನು ಇಂಡೋ-ಜರ್ಮನ್ ಸಮನ್ವಯ ಸಮಿತಿ ಕೈಗೆತ್ತಿಕೊಂಡಿದ್ದು, ವಾಸ್ತವಿಕ ನೆಲಗಟ್ಟಿನಲ್ಲಿ ಪರಿಹಾರ ಸೂತ್ರ ಸಿದ್ಧಪಡಿಸಲಿದ್ದೇವೆ.



| ಪ್ರೊ. ಸ್ಟೀಫನ್ ವಿ ಕ್ರಾಮನ್ ಗೊಟ್ಟಿನ್‌ಜೆನ್ ವಿವಿ, ಜರ್ಮನಿ

ಅಧ್ಯಯನದ ಕೆಲ ಪ್ರಮುಖಾಂಶ

• ಆಹಾರದ ಮೇಲಿನ ಮಾಸಿಕ ವೆಚ್ಚದಲ್ಲಿ ಗಣನೀಯ ಏರಿಕೆ. ಗ್ರಾಮೀಣರಿಗಿಂತ ನಗರವಾಸಿಗಳ ವೆಚ್ಚ ಹೆಚ್ಚಳ. • ಕೃಷಿಯೇತರ ಕ್ಷೇತ್ರದಲ್ಲಿ ಗ್ರಾಮೀಣ, ಅರೆ ಪಟ್ಟಣ, ನಗರಗಳಲ್ಲಿ ಕ್ರಮವಾಗಿ ಶೇ.40, ಶೇ.53 ಹಾಗೂ ಶೇ.63 ಉದ್ಯೋಗ ಸೃಷ್ಟಿ. • ಗ್ರಾಮೀಣ ಮಹಿಳೆಯರಲ್ಲಿ ಅಪೌಷ್ಟಿಕತೆ, ಬೊಜ್ಜು, ಜೀವನಶೈಲಿ, ಆರೋಗ್ಯಕರವಲ್ಲದ ಆಹಾರ ಸೇವನೆ ಹೆಚ್ಚಳ. • ಗ್ರಾಮೀಣ ಪ್ರದೇಶದಲ್ಲಿ ಶೇ.14.2 ಪ್ರಮಾಣದಲ್ಲಿ ತೂಕ ಇಳಿಕೆ, ನಗರವಾಸಿಗಳಲ್ಲಿ ಶೇ.24.5 ತೂಕ ಹೆಚ್ಚಳ ಹಾಗೂ ಶೇ.30.5 ಬೊಜ್ಜು ಹೆಚ್ಚಳ. • ನಗರೀಕರಣದಿಂದ ಗ್ರಾಮೀಣ ಮಹಿಳೆಯರಲ್ಲಿ ಶೇ.33 ಹಾಗೂ ನಗರ ಮಹಿಳೆಯರಲ್ಲಿ ಶೇ.42 ಪ್ರಮಾಣದ ಬೊಜ್ಜು ಹೆಚ್ಚಳ. • ನಗರವಾಸಿಗಳಲ್ಲಿ ಪೌಷ್ಟಿಕಯುಕ್ತ ಆಹಾರ ಸೇವನೆ ಹೆಚ್ಚಳ, ಗ್ರಾಮೀಣ ಭಾಗದಲ್ಲಿ ತುಸು ಇಳಿಕೆ.



ಪರಿಸರ ಕಾಳಜಿಗೆ ಸಲಹೆ

ನಗರೀಕರಣದಿಂದ ಪರಿಸರದ ಮೇಲೆ ಭಾರಿ ಪರಿಣಾಮ ಬೀರಿದೆ. ಹಸಿರು ಪ್ರದೇಶದ ನಿರಂತರ ಇಳಿಕೆ ಜತೆಗೆ ಗಿಡ-ಮರಗಳು ಕಣ್ಮರೆಯಾಗುತ್ತಿದೆ. ಇದರಿಂದ ಉಸಿರಾಟದ ಸಮಸ್ಯೆ ಹೆಚ್ಚುತ್ತಿದೆ. ಉದ್ಯಾನಗಳಿಗಿಂತ ಕಿರು ಅರಣ್ಯ ಮಾದರಿಯ ಟ್ರೀ ಪಾರ್ಕ್ ನಿರ್ಮಾಣಕ್ಕೆ ಒತ್ತು ನೀಡಬೇಕು. ಜೀವವಾಯು ನೀಡುವ ಮರಗಳನ್ನು ಗುರುತಿಸಿ ಅವುಗಳನ್ನೇ ಹೆಚ್ಚಾಗಿ ನೆಡುವಂತೆ ತಜ್ಞರು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

100 ವಿಜ್ಞಾನಿಗಳಿಂದ ಅಧ್ಯಯನ

ದೇಶದಲ್ಲೇ ಮೊದಲ ಬಾರಿಗೆ ವೈಜ್ಞಾನಿಕವಾಗಿ ನಗರೀಕರಣದಿಂದಾಗುತ್ತಿರುವ ಪರಿಣಾಮ ಹಾಗೂ ಕೃಷಿ ಮೇಲಾಗುತ್ತಿರುವ ಅಧ್ಯಯನಕ್ಕೆ ಚಾಲನೆ ದೊರೆತಿದೆ. ದೇಶದ ವಿವಿಧ ಕೃಷಿ ಹಾಗೂ ಕೃಷಿ ಸಂಬಂಧಿತ ವಿವಿಗಳಲ್ಲಿರುವ ಸುಮಾರು 100 ಮಂದಿ ಕೃಷಿ ವಿಜ್ಞಾನಿಗಳು, ಪರಿಣತರು, ಸಂಶೋಧನಾ ವಿದ್ಯಾರ್ಥಿಗಳ ತಂಡ ಅಧ್ಯಯನದಲ್ಲಿ ನಿರತವಾಗಿದೆ. ಮುಂದಿನ ವರ್ಷ ಪೂರ್ಣಗೊಳ್ಳುವ ಈ ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ನಗರೀಕರಣದ ಪರಿಣಾಮದ ಜತೆಗೆ ಪರಿಹಾರೋಪಾಯಗಳನ್ನು ಶಿಫಾರಸು ಮಾಡಲಾಗುತ್ತದೆ. ವಿಶೇಷವೆಂದರೆ ಈ ಕಾರ್ಯದಲ್ಲಿ ಜರ್ಮನ್ ವಿಶ್ವವಿದ್ಯಾಲಯದ ಹಿರಿಯ ತಜ್ಞರು, ವಿಜ್ಞಾನಿಗಳು ಕೈಜೋಡಿಸಿದ್ದಾರೆ. ಭಾರತದ ನಗರಗಳಲ್ಲಾಗುತ್ತಿರುವ ನಗರೀಕರಣಕ್ಕೂ ಹಾಗೂ ವಿದೇಶದ ನಗರಗಳಲ್ಲಾಗುತ್ತಿರುವ ನಗರೀಕರಣಕ್ಕೂ ತುಲನೆ ಮಾಡಿ ಪರಿಣಾಮಗಳ ಅಧ್ಯಯನ ಮಾಡಲಾಗುತ್ತದೆ.

ಇಂಡೋ - ಜರ್ಮನ್ ಜಂಟಿ ಸಹಯೋಗ

ನಗರೀಕರಣ ದಿಂದಾಗುತ್ತಿರುವ ಸಮಸ್ಯೆಗಳ ಕುರಿತು ನಡೆದಿರುವ ಅಧ್ಯಯನಕ್ಕೆ ಭಾರತದ ವಿಜ್ಞಾನಿಗಳ ಜತೆ ಜರ್ಮನ್ ವಿಜ್ಞಾನಿಗಳು ಹಾಗೂ ಪರಿಣತರು ಕೈಜೋಡಿಸಿದ್ದಾರೆ. ಅಧ್ಯಯನವನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್ (ಐಸಿಎಆರ್) ಮಾರ್ಗದರ್ಶನದಲ್ಲಿ ಇಂಡೋ - ಜರ್ಮನ್ ಜಂಟಿ ಸಮನ್ವಯ ಸಮಿತಿ ಕೈಗೊಂಡಿದೆ. ಬೆಂಗಳೂರು ಕೃಷಿ ವಿವಿ ಜತೆಗೆ ದೇಶದ ವಿವಿಧ ಕೃಷಿ ಸಂಬಂಧಿತ ವಿವಿಗಳು, ಸಾಮಾಜಿಕ ಹಾಗೂ ಆರ್ಥಿಕ ಪರಿಣಾಮ ಸಂಸ್ಥೆ (ಐಎಸ್ ಇಸಿ), ಸ್ವಯಂಸೇವಾ ಸಂಸ್ಥೆಗಳು ಸಾಥ್ ನೀಡಿವೆ.

Vijayavani Pg-spl 3

ವಿ ರೈತ ಮಿತ್ರ

ಕೃಷಿಯಲ್ಲಿ ಉದ್ಯಮಶೀಲತೆ ಅವಕಾಶಗಳ ಬಗ್ಗೆ ತಿಳಿಸಿ.

| ಆದಿತ್ಯ ಹೊಸಕೋಟೆ

ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಬಡತನ ನಿರ್ಮೂಲನೆಗಾಗಿ ಕೃಷಿ ಉತ್ಪಾದಕತೆ ಹೆಚ್ಚಳ ಮತ್ತು ಲಾಭದಾಯಕ ಉದ್ಯಮಶೀಲತೆಯ ಅಗತ್ಯವಿದೆ.

ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳು: ಬೆಳೆದ ಬೆಳೆಯನ್ನು ನೇರವಾಗಿ ಮಾರಾಟ ಮಾಡುವ ಬದಲು ರೈತರ ಹಂತದಲ್ಲಿಯೇ ಪ್ರಾಥಮಿಕ ಸಂಸ್ಕರಣೆ ಮಾಡಿ ಮಾರಾಟ ಮಾಡುವುದರಿಂದ ಬೆಳೆಗೆ ಹೆಚ್ಚಿನ ಬೆಲೆ ಪಡೆಯಲು ಸಾಧ್ಯವಾಗುತ್ತದೆ. ಭತ್ತವನ್ನು ನೇರವಾಗಿ ಮಾರಾಟ ಮಾಡುವ ಬದಲಿಗೆ ಅಕ್ಕಿಯನ್ನಾಗಿಸಿ ಮಾರಾಟ ಮಾಡಬೇಕು. ಅದೇ ರೀತಿ ಬೇಳೆ, ರವೆ, ಹಿಟ್ಟು ಮುಂತಾದವುಗಳನ್ನು ತಯಾರಿಸಲು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಬೇಕು.

ಕೃಷಿ ಆಧಾರಿತ ಉತ್ಪನ್ನ ತಯಾರಿಕಾ ಘಟಕಗಳು: ಕೃಷಿ ಉತ್ಪನ್ನಗಳನ್ನು ಮುಖ್ಯ ಕಚ್ಚಾ ವಸ್ತುವಾಗಿ ಆಧರಿಸಿ, ಹೊಸ ಉತ್ಪನ್ನಗಳನ್ನು ತಯಾರಿಸುವುದು. ಉದಾಹರಣೆಗೆ ಸಾವಯವ ಬೆಲ್ಲ, ಬೇಕರಿ, ಮೌಲ್ಯವರ್ಧಿತ ಆಹಾರ ಪದಾರ್ಥಗಳು ಇತ್ಯಾದಿ.

ಕೃಷಿ ಪರಿಕರಗಳ ಉತ್ಪಾದನಾ ಘಟಕಗಳು: ಸಾವಯವ ಗೊಬ್ಬರ, ಆಹಾರ ಸಂಸ್ಕರಣೆ, ಕೃಷಿ ಉಪಕರಣಗಳ ಘಟಕಗಳು ಇತ್ಯಾದಿ.

ಇತರ ಕ್ಷೇತ್ರಗಳು: ಜೀನು ಸಾಕಣೆ, ಪಶು ಆಹಾರ, ಬೀಜ ಸಂಸ್ಕರಣೆ, ಅಣಬೆ ಉತ್ಪಾದನೆ, ಎರೆಹುಳು ಗೊಬ್ಬರ ಉತ್ಪಾದನೆ, ಕುರಿ ಮತ್ತು ಮೇಕೆ ಸಾಕಣೆ, ಸಾವಯವ ತರಕಾರಿ ಮತ್ತು ಹಣ್ಣುಗಳ ಚಿಲ್ಲರೆ ಮಾರಾಟ ಮಳಿಗೆಗಳು ಇತ್ಯಾದಿ.

| ಡಾ. ಕೆ.ಪಿ. ರಘುಪ್ರಸಾದ್ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು



ಕಳೆದ ವರ್ಷ ತೊಗರಿ ಬೆಳೆಗೆ ಬಂಜೆ ರೋಗ ಕಂಡು ಬಂದಿತ್ತು. ಈ ವರ್ಷ ಮುನ್ನೆಚ್ಚರಿಕೆ ವಹಿಸುವುದು ಹೇಗೆ?

| ಶರಣ್ ಮಾಲೂರು

ಬಂಜೆ ರೋಗ ಒಂದು ನಂಜಾಣುರೋಗ. ನುಸಿಯ ಸಹಾಯದಿಂದ ಒಂದು ಗಿಡದಿಂದ ಇನ್ನೊಂದು ಗಿಡಕ್ಕೆ ಹರಡುತ್ತದೆ. ಹಾನಿಯಾದ ಗಿಡಗಳ ಬೆಳವಣಿಗೆ ಕುಂಠಿತಗೊಂಡು ಎಲೆಗಳು ಚಿಕ್ಕದಾಗಿರುತ್ತವೆ. ಹಳದಿ ಮಿಶ್ರಿತ ಹಸಿರು ಬಣ್ಣದ ಮಚ್ಚೆಗಳನ್ನು ಎಲೆಗಳ ಮೇಲೆ ಕಾಣಬಹುದು. ರೋಗಕ್ಕೆ ತುತ್ತಾದ ಗಿಡಗಳು ಸಂಪೂರ್ಣವಾಗಿ ಬಂಜೆಯಾಗಿದ್ದು ಹೂವು ಮತ್ತು ಕಾಯಿ ಬಿಡುವುದಿಲ್ಲ. **ಹತೋಟಿ:** ಪ್ರಾರಂಭಿಕ ಹಂತದಲ್ಲೇ ಹಾನಿಯದ ಗಿಡಗಳನ್ನು ಕಿತ್ತು ನಾಶಪಡಿಸಬೇಕು. ಬದುಗಳ ಮೇಲೆ ಇರುವ ಗಿಡಗಳಲ್ಲಿ ನಂಜಾಣು ಮತ್ತು ನುಸಿ ಆಶ್ರಯ ಪಡೆಯುವುದರಿಂದ ಬೆಳೆ ಮುಗಿದ ನಂತರ ಅವುಗಳನ್ನು ಕಿತ್ತು ನಾಶಪಡಿಸುವುದು. ರೋಗ ನಿರೋಧಕ ತಳಿಯಾದ ಬಿ.ಆರ್.ಜಿ.-3 ತಳಿಯನ್ನು ಬೆಳೆಯುವುದು. ನುಸಿ ನಾಶಕಗಳಾದ 2 ಮಿ.ಲೀ. ಪ್ರೊಪರ್‌ಗೈಟ್ 57 ಇ.ಸಿ. ಅಥವಾ 1.7 ಮಿ.ಲೀ. ಫೆನಾಝುಕ್ವಿನ್ 10 ಇ.ಸಿ. ಅಥವಾ 1.0 ಮಿ.ಲೀ. ಫೆನ್ಪೈರಾಕ್ಸಿಮೇಟ್ 50 ಇ.ಸಿ. ಅನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಬಿತ್ತನೆಯಾದ 25 ಮತ್ತು 45 ದಿನಗಳಲ್ಲಿ ಎರಡು ಬಾರಿ ಸಿಂಪಡಿಸಬೇಕು.

| ಪ್ರಿಯಾಂಕಾ ಬಿ. ಸಸ್ಯರೋಗ ತಜ್ಞರು

ಕೃಷಿಯಲ್ಲಿ ಕತ್ತಾಳೆಯ ಪ್ರಾಮುಖ್ಯತೆ ತಿಳಿಸಿ.

| ಶ್ರೀರಾಮ್ ತುಮಕೂರು

ಕತ್ತಾಳೆಯು ಉಷ್ಣವಲಯದ, ಉಪೋಷ್ಣವಲಯದ ಮತ್ತು ಸಮಶೀತೋಷ್ಣ ಪ್ರದೇಶದಲ್ಲಿ ಬೆಳೆಯಬಹುದಾದ ಸಣ್ಣ ಕಾಂಡದ, ಎತ್ತರವಾಗಿ ಬೆಳೆಯುವ ಸಸ್ಯವಾಗಿದೆ. ಈ ಬೆಳೆಯನ್ನು ಪ್ರಮುಖವಾಗಿ ನಾರಿಗಾಗಿ ಬೆಳೆಯಲಾಗುತ್ತದೆ. ಇದರ ನಾರು ಉತ್ತಮ ಗುಣಮಟ್ಟದಿಂದ ಕೂಡಿದ್ದು, ಪ್ರತಿ ಗಿಡಕ್ಕೆ 40-50 ಎಲೆಗಳನ್ನು ಪ್ರತಿ ವರ್ಷ ಪಡೆಯಬಹುದು. ನಾರಿನಿಂದ ಉತ್ತಮ ಗುಣಮಟ್ಟದ ಹಗ್ಗಗಳು, ಮ್ಯಾಟ್‌ಗಳು, ಬ್ರಶ್ ಇತ್ಯಾದಿ ತಯಾರಿಸಬಹುದು. ಈ ನಾರು ಪ್ರಬಲವಾಗಿದ್ದು, ಹೆಚ್ಚು ಬಾಳಿಕೆ ಬರುತ್ತದೆ. ಕತ್ತಾಳೆಯನ್ನು ಕೇವಲ ನಾರಿಗಲ್ಲದೆ ರೈತರ ಕೃಷಿ ಜಮೀನಿನ ಸುತ್ತ ಬೇಲಿಯ ರೀತಿ ಬೆಳೆಯುವುದರಿಂದ, ಬೆಳೆಯನ್ನು ಇತರ ಪ್ರಾಣಿ ಮತ್ತು ದಾರಿಹೋಕರಿಂದ ಕಾಪಾಡಿಕೊಳ್ಳಬಹುದು. ಇದನ್ನು ಮುಖ್ಯ ಬೆಳೆಯಾಗಿ ಬೆಳೆಯುವುದು ಲಾಭದಾಯಕವಾಗಿದ್ದು, 6X6 ಅಡಿ ಅಂತರದಲ್ಲಿ ನೆಡುವುದು ಉತ್ತಮ.

| ಡಾ. ಬಿ. ಜಿ. ವಾಸಂತಿ ಮಣ್ಣು ವಿಜ್ಞಾನಿ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

VijayaKarnataka Pg-spl 1

ಆದಾಯ ಹೆಚ್ಚಳಕ್ಕೆ ಬೀಜೋತ್ಪಾದನೆ ನೆರವು

■ ವಿಕ ಸುದ್ದಿಲೋಕ ಬೆಂಗಳೂರು

ಬೆಳೆಗಳು ಫಲ ಕೊಡುವ ವೇಳೆ ದರ ಇಳಿಕೆಯಾಗಿ ರೈತರು ನಷ್ಟ ಅನುಭವಿಸುವುದು ಸಹಜ. ಹೀಗಾಗಿ ಬೀಜೋತ್ಪಾದನೆ ಮೂಲಕ ಆದಾಯ ಕಂಡುಕೊಳ್ಳಬಹುದು ಎಂದು ಹನಿಯೂರಿನ ಗೋಪಾಲಕೃಷ್ಣ ತೋರಿಸಿಕೊಟ್ಟಿದ್ದಾರೆ.

ಹಲವು ಬಾರಿ ತರಕಾರಿ ಬೆಳೆ ಬೆಳೆದು ಕೈ ಸುಟ್ಟುಕೊಂಡಿದ್ದ ಗೋಪಾಲಕೃಷ್ಣ ಬೀಜಗಳನ್ನು ಬೆಳೆದು ಬೀಜ ಕಂಪನಿಗಳಿಗೆ ಮಾರುತ್ತಿದ್ದಾರೆ. ಈ ಬಾರಿ ಬೀನ್ಸ್ ಬೀಜ ಉತ್ಪಾದಿಸಿ ಕೊಡುವ ಬಗ್ಗೆ ಖಾಸಗಿ ಕಂಪನಿ ಜತೆಗೆ ಒಪ್ಪಂದ ಮಾಡಿಕೊಂಡಿದ್ದರು.

ಪ್ರಾಯೋಗಿಕವಾಗಿ ಅರ್ಧ ಎಕರೆ ಜಾಗದಲ್ಲಿ ಬೀನ್ಸ್ ಬೆಳೆದಿದ್ದರು. 8 ಕ್ವಿಂಟಾಲ್ ಬೀಜಗಳನ್ನು ಬೆಳೆಯುವಲ್ಲಿ ಯಶಸ್ವಿಯಾದರು. ಪ್ರತಿ ಕ್ವಿಂಟಾಲ್ ಬೀಜಕ್ಕೆ 15,000 ರೂ. ಕೊಡುವ ಸಂಬಂಧ ಒಪ್ಪಂದದಲ್ಲಿ ಉಲ್ಲೇಖಿಸಲಾಗಿತ್ತು. ಅದರಂತೆ 1,20,000 ರೂ. ಗಳಿಸಿದ್ದಾರೆ. ಅಕ್ಟೋಬರ್‌ನಿಂದ ಫೆಬ್ರವರಿ ಅವಧಿಯಲ್ಲಿ ಬೀಜದ ಬೆಳೆಗಳನ್ನು ಬೆಳೆಬಹುದು. ಕಡಿಮೆ ಅವಧಿಯಲ್ಲಿ, ನಿಶ್ಚಿತ ಆದಾಯ ಗಳಿಸಲು ಸಾಧ್ಯವಾಯಿತು ಎಂದು ಅವರು ಹೇಳುತ್ತಾರೆ. ತರಕಾರಿ ಬೆಳೆಯುವ ಬದಲು ಬೀಜೋತ್ಪಾದನೆಯತ್ತ ಗಮನಹರಿಸಲು ಅವರು ನಿರ್ಧರಿಸಿದ್ದಾರೆ.



ತರಕಾರಿ ಬೆಳೆ: ಗೋಪಾಲಕೃಷ್ಣ ಅವರು ಅರ್ಧ ಎಕರೆ ವಿಸ್ತೀರ್ಣದ ಪಾಲಿಹೌಸ್‌ನಲ್ಲಿ ಕ್ಯಾಪ್ಸಿಕಂ ಬೆಳೆಯುತ್ತಿದ್ದಾರೆ. 20 ಟನ್ ಬೆಳೆ ಬರುತ್ತಿದ್ದು, ಪ್ರತಿ ಕೆಜಿಗೆ 50 ರೂ.ನಂತೆ ಬೆಲೆ ಸಿಗುತ್ತಿದೆ. ಇದರಿಂದಲೇ 10 ಲಕ್ಷ ರೂ. ಆದಾಯವಿದೆ.

ಈ ಹಿಂದೆ ದ್ರಾಕ್ಷಿ ಬೆಳೆಯುತ್ತಿದ್ದ ಜಾಗದಲ್ಲಿ ಹಾಗಲ ಬೆಳೆ ಬೆಳೆಯಲು ಸಿದ್ಧತೆ ನಡೆಸಿದ್ದಾರೆ. ಯೂರೋಪಿಯನ್ ಕುಕುಂಬರ್ (ಸೌತೆ ಕಾಯಿ), ಸ್ವೀಟ್ ಕಾರ್ನ್ (ಜೋಳ), ಜೋಳ, ರಾಗಿ, ಅವರೆ, ತೊಗರಿ ಬೆಳೆಯುತ್ತಾರೆ. ಪಾಲಿಹೌಸ್‌ನಲ್ಲಿ ಪುಷ್ಪಕೃಷಿಯನ್ನೂ ಕೈಗೊಳ್ಳುತ್ತಿದ್ದಾರೆ. 4 ಹಸುಗಳನ್ನು ಸಾಕಿದ್ದು, ಹಾಲು ಮಾರುವ ಮೂಲಕವೂ ಆದಾಯ ಗಳಿಸುತ್ತಿದ್ದಾರೆ. ತರಕಾರಿ ಬೆಳೆಗಳನ್ನು ನೇರವಾಗಿ ಮಾರಾಟ ಬಿಗ್ ಬಾಸ್ಕೆಟ್ ಮತ್ತು ರಿಲಯನ್ಸ್ ಫ್ರೆಶ್‌ನಂತಹ ಸಂಸ್ಥೆಗಳಿಗೆ ಮಾರಾಟ ಮಾಡುತ್ತಿದ್ದಾರೆ.

ಬೀಜೋತ್ಪಾದನೆ, ಸಮಗ್ರ ಕೃಷಿ ಮೂಲಕ ಖರ್ಚು ಕಳೆದು ವಾರ್ಷಿಕ 10 ಲಕ್ಷ ರೂ.ಗೂ ಹೆಚ್ಚು ಲಾಭ ಗಳಿಸುತ್ತಿದ್ದಾರೆ.


ಕಿರು ಪರಿಚಯ

ಹೆಸರಘಟ್ಟ ಹೋಬಳಿ, ಹನಿಯೂರಿನ ಗೋಪಾಲಕೃಷ್ಣ ಎಚ್.ಕೆ. ಅವರು ವಿಕ ಸೂಪರ್ ಸ್ಟಾರ್ ರೈತ - 2022(ಬೆಂ. ನಗರ ಜಿಲ್ಲೆ) ಪ್ರಶಸ್ತಿ ಪಡೆದಿದ್ದಾರೆ. ಅವರ ಕಿರುಪರಿಚಯ ಇಲ್ಲಿದೆ.









ಜೇನುನೊಣಗಳಿಗೂ ತಟ್ಟಿದ ಬಿಸಿಲು ತಾಪ

ತುಪ್ಪ ಸಂಗ್ರಹಿಸಲು ನೀರಿಗಾಗಿ ಕಿ.ಮೀ.ಗಟ್ಟಲೆ ದೂರ ಹಾರಾಟ

■ ಸುರೇಶ್ ಚೆರಿಯಮನೆ ಶನಿವಾರಸಂತೆ (ಕೊಡಗು)
sureshcheriyamane@gmail.com

ಬೇಸಿಗೆಯ ಬಿಸಿಲಿನ ಧಗೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಕೊಡಗು ಜಿಲ್ಲೆಯಾದ್ಯಂತ ವಾಡಿಕೆಯಂತೆ ಫೆಬ್ರವರಿ ಕೊನೆ ಅಥವಾ ಮಾರ್ಚ್ ತಿಂಗಳ ಮೊದಲ ವಾರದಲ್ಲಿ ಮಳೆಯಾಗುತ್ತಿತ್ತು. ಆದರೆ ಈ ವರ್ಷ ಇನ್ನೂ ಕೆಲವೆಡೆ ಮಳೆಯಾಗದಿರುವ ಹಿನ್ನೆಲೆಯಲ್ಲಿ ಬಿಸಿಲಿನ ತಾಪಮಾನ ಏರಿಕೆಯಾಗುತ್ತಿದ್ದು, ಬಿಸಿಲಿನ ತಾಪ ಜೇನುನೊಣಗಳಿಗೂ ತಟ್ಟಿದೆ. ಜೇನು ಉತ್ಪತ್ತಿಗೆ ಅಡಚಣೆಯಾಗುತ್ತಿದ್ದು, ಜೇನು ಕೃಷಿಕರಿಗೂ ಪರಿಣಾಮ ತಟ್ಟಿದೆ.


ಜೇನು ಉತ್ಪತ್ತಿಗೂ ಹಿನ್ನಡೆ, ಜೇನು ಕೃಷಿಕರಿಗೆ ಸಂಕಷ್ಟ

ಜೇನು ಕೃಷಿ ಸಹ ಜಿಲ್ಲೆಯ ಒಂದು ಕಸುಬಾಗಿದ್ದು, ಹಿಂದೆ ಜೇನು ಕೃಷಿಗಾಗಿ ಪ್ರತ್ಯೇಕ ಇಲಾಖೆ ಇತ್ತು. ಆದರೆ ಬದಲಾದ ಕಾಲಘಟ್ಟದಲ್ಲಿ ರೈತರು ಜೇನು ಕೃಷಿಯತ್ತ ಆಸಕ್ತಿ ಕಳೆದುಕೊಂಡ ನಂತರ ತೋಟಗಾರಿಕೆ ಇಲಾಖೆಗೆ ಒಳಪಡಿಸಲಾಗಿದೆ.

ಜೇನುನೊಣಗಳು ಮರಗಿಡಗಳ ಹೂವಿನ ಮಕರಂದವನ್ನು ಸಂಗ್ರಹಿಸಿ ಜೇನುತುಪ್ಪ ಮಾಡುತ್ತದೆ. ನೈಸರ್ಗಿಕ ಅರಣ್ಯದಲ್ಲಿರುವ ಮರಗಿಡಗಳಲ್ಲಿ ಬಿಡುವ ಹೂವಿನಲ್ಲಿ ಸ್ವಾದಿಷ್ಟ ಮಕರಂದ ಇರುವುದರಿಂದ ಜೇನುನೊಣಗಳು ಅಲ್ಲಿಗೆ ಹೋಗಿ ಪರಾಗಸ್ಪರ್ಶ ಮೂಲಕ ಜೇನು ಸಂಗ್ರಹಿಸುತ್ತವೆ. ಆದರೆ ಈ ವರ್ಷ ಇನ್ನೂ ಮಳೆಯಾಗದಿರುವುದರಿಂದ ಮರಗಿಡಗಳಲ್ಲಿ ವಾಡಿಕೆಯಂತೆ ವಸಂತ ಕಾಲವಾದರೂ ಹೂವು ಬಿಟ್ಟಿಲ್ಲ. ಇದರಿಂದ ಜೇನುನೊಣಗಳಿಗೆ ಜೇನುತುಪ್ಪ ಸಂಗ್ರಹಿಸಲು ಅಡಚಣೆಯಾಗಿದೆ.

ಜೇನುನೊಣಗಳಿಗೂ ನೀರಿಗೆ ಹಾಹಾಕಾರ

ಜೇನುನೊಣಗಳಿಗೆ ಅವು ಸಂಗ್ರಹಿಸುವ ಮಕರಂದದಲ್ಲಿ ಶೇ.70ರಷ್ಟು ನೀರಿನ ತೇವಾಂಶ ಸಿಗುತ್ತದೆ. ಇದರಿಂದ ಸಮತೋಲನ ಮಟ್ಟದಲ್ಲಿ ಹಾಗೂ ಅಧಿಕ ಪ್ರಮಾಣದಲ್ಲಿ ಜೇನುತುಪ್ಪ ಉತ್ಪತ್ತಿಯಾಗುತ್ತದೆ. ಆದರೆ ಈ ವರ್ಷದ ಬೇಸಿಗೆಯಲ್ಲಿ ಬಿಸಿಲಿನ ತಾಪಮಾನ ಏರಿಕೆಯಾಗುತ್ತಿರುವುದರಿಂದ ಮರಗಿಡಗಳು ಹೂವು ಬಿಟ್ಟಿಲ್ಲ. ಇದರಿಂದ ಜೇನುನೊಣಗಳು ಮಕರಂದ ಸಂಗ್ರಹಿಸುವ ಸಲುವಾಗಿ ಕಿ.ಮೀ.ದೂರ ಹಾರಾಡುತ್ತಿವೆ. ಸಮತೋಲನ ಮಟ್ಟದಲ್ಲಿ ಜೇನುತುಪ್ಪ ಉತ್ಪತ್ತಿ ಮಾಡುವ ಸಲುವಾಗಿ ಜೇನುನೊಣಗಳು ಕೊಲ್ಲಿ, ತೋಡು, ಹೊಳೆ, ಕೆರೆ ಬದಿಯ ತೇವಾಂಶ ಇರುವ ಜಾಗದಲ್ಲಿ ನೀರನ್ನು ಸಂಗ್ರಹಿಸುತ್ತವೆ. ಆದರೆ ಇಲ್ಲಿಯೂ ಬಿಸಿಲಿನ ತಾಪಕ್ಕೆ ಬತ್ತಿಹೋಗಿದ್ದು ಜೇನುನೊಣಗಳಿಗೆ ಅಡಚಣೆಯಾಗಿದೆ. ಮತ್ತೊಂದು ಕಡೆಯಲ್ಲಿ ಕಾಫಿತೋಟಗಳಲ್ಲಿ ಔಷಧ ಸಿಂಪಡಣೆಯಿಂದ ಮರ ಗಿಡಗಳಲ್ಲಿ ಬಿಡುವ ಹೂವಿನಲ್ಲಿ ರಾಸಾಯನಿಕ ಮಿಶ್ರಣ ಮಕರಂದ ಇರುವುದರಿಂದ ಜೇನು ಉತ್ಪತ್ತಿಗೂ ಅಡಚಣೆಯಾಗುತ್ತಿರುವುದರಿಂದ ಜೇನು ಕೃಷಿ ಕುಂಠಿತಗೊಳ್ಳುತ್ತಿದೆ.



ಈ ವರ್ಷ ನಮ್ಮ ವ್ಯಾಪ್ತಿಯಲ್ಲಿ ಇನ್ನೂ ಮಳೆಯಾಗದಿರುವುದರಿಂದ ಬಿಸಿಲಿನ ತಾಪ ಹೆಚ್ಚಾಗುತ್ತಿದೆ. ಪಕ್ಕದ ಅರಣ್ಯದಲ್ಲಿರುವ ಮರಗಿಡಗಳಲ್ಲಿ ಹೂವು ಬಿಟ್ಟಿಲ್ಲ, ಇದರಿಂದ ಜೇನುನೊಣಗಳಿಗೆ ಮಕರಂದ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ ಮತ್ತು ಜೇನು ಉತ್ಪತ್ತಿಗೆ ಸಮಸ್ಯೆಯಾಗುತ್ತಿದೆ.

- ಟಿ.ಆರ್.ಪುರುಷೋತ್ತಮ್ ಉದ್ಯಮಿ ಮತ್ತು ಜೇನು ಕೃಷಿಕ, ತೊಯ್ಯಕ್ಕಿ ಗ್ರಾಮ.

ನಾನು ಜೇನು ಕೃಷಿ ಮಾಡುತ್ತಿದ್ದೇನೆ. ಪ್ರತಿವರ್ಷ ಬೇಸಿಗೆ ಪ್ರಾರಂಭದಲ್ಲಿ ಮಳೆಯಾಗುತ್ತಿತ್ತು. ಈ ವರ್ಷದ ಬಿಸಿಲಿಗೆ ಜೇನು ಉತ್ಪತ್ತಿಗೂ ಅಡಚಣೆಯಾಗಿದೆ. ಇದರಿಂದ ಜೇನು ಕೃಷಿಕರಿಗೂ ಸಮಸ್ಯೆಯಾಗಿದೆ.

- ಡಿ.ಪಿ.ಮಾದಪ್ಪ
ಹವ್ಯಾಸಿ ಜೇನು ಕೃಷಿಕ, ಗೌಡಳ್ಳಿ

ಜೇನುನೊಣಗಳ ಹೂವಿನ ಪರಾಗ ಸ್ಪರ್ಶದ ಮೂಲಕ ಜೇನುತುಪ್ಪ ಉತ್ಪತ್ತಿಗೊಳ್ಳುತ್ತದೆ. ಜೇನು ತುಪ್ಪ ಉತ್ಪತ್ತಿಗೆ ಶೇ.70ರಷ್ಟು ನೀರಿನ ತೇವಾಂಶದ ಅಗತ್ಯವಿದೆ. ಜೇನು ನೊಣಗಳು ಇದನ್ನು ನೈಸರ್ಗಿಕ ಅರಣ್ಯ ಪರಿಸರ, ಕೊಲ್ಲಿ, ತೋಡುಗಳ ತೇವಾಂಶ ಇರುವ ಜಾಗಗಳಲ್ಲಿ ಸಂಗ್ರಹಿಸುತ್ತವೆ. ಆದರೆ ಬೇಸಿಗೆಯಲ್ಲಿ ಜೇನುನೊಣಗಳಿಗೆ ನೈಸರ್ಗಿಕವಾಗಿ ಮಕರಂದ ಸಂಗ್ರಹಿಸಲು ಸಾಧ್ಯವಾಗದಿರುವುದರಿಂದ ಜೇನುತುಪ್ಪ ಉತ್ಪತ್ತಿಯಾಗುತ್ತಿಲ್ಲ.

- ರಾಜು ಜೇನು ಕೃಷಿ ತಜ್ಞ, ತೋಟಗಾರಿಕೆ ಇಲಾಖೆ, ಸೋಮವಾರಪೇಟೆ